# ಭಾಗವತದ ಸಾರತತ್ತ್ವ

ಸ್ವಾಮಿ ರಂಗನಾಥಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ವೈವಿಧ್ಯತೆಯಲ್ಲಿ ಏಕತೆ:**

ಏಕಂ ಸದ್ವಿಪ್ರಾ ಬಹುಧಾ ವದಂತಿ—"ಸತ್ಯ ಒಂದೇ, ಋಷಿಗಳು ಅದನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ" —ಎಂಬ ಪ್ರಸಿದ್ಧ ಋಗ್ವೇದದ ಹೇಳಿಕೆ ನಮಗೆಲ್ಲ ಗೊತ್ತಿದೆ. ಆ ಸತ್ಯವೇ ಐದು ಸಾವಿರ ವರ್ಷಗಳ ಭಾರತೀಯ ಚಿಂತನೆಯ ಕೇಂದ್ರಬಿಂದುವಾಗಿದೆ. ವೇದಾಂತದ ಪ್ರಕಾರ ಮತಕ್ಕೂ ತತ್ತ್ವಕ್ಕೂ ವ್ಯತ್ಯಾಸವಿದೆ. ಮತವೆಂದರೆ ಅಭಿಪ್ರಾಯ. ಆದ್ದರಿಂದ ಬಹು ಮತಗಳು ಸಾಧ್ಯ. ಆದರೆ ಈ ಮತಗಳ ಹಿಂದಿರುವ ಸತ್ಯ ಯಾವುದು? ಈ ವೈಜ್ಞಾನಿಕ ಪ್ರಶ್ನೆಗೆ ವೇದಾಂತ ಸರಿಯಾದ ಉತ್ತರವನ್ನು ನೀಡಿದೆ. ಅದು ವಿವಿಧ ಧರ್ಮಗಳ ಹಿಂದಿರುವ ಅದ್ವೈತ ದಿವ್ಯತತ್ತ್ವವನ್ನು ಕಂಡುಹಿಡಿದು, ಎಲ್ಲ ಧರ್ಮಗಳಿಗೂ ಬೆಳೆಯುವುದಕ್ಕೆ ಅವಕಾಶ ನೀಡಿತು. ಏಕೆಂದರೆ ಮಾರ್ಗಗಳು ಬೇರೆಯಾದರೂ ಗುರಿ ಒಂದೇ. ಈ ಸತ್ಯವು ಪುನಃಪ್ರತಿಪಾದಿತವಾಗಿದೆ, ಭಾಗವತದ ಈ ಕೆಳಗಿನ ಶ್ಲೋಕದಲ್ಲಿ:

**ವದಂತಿ ತತ್ತತ್ತ್ವವಿದಸ್ತತ್ತ್ವಂ ಯಜ್ಜ್ಞಾನಮದ್ವಯಮ್ ।**
**ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥೧.೨.೧೧॥**

"ತತ್ತ್ವವಿದರು ಒಂದೇ ಅದ್ವಯ ಜ್ಞಾನವೇ ಬ್ರಹ್ಮ, ಪರಮಾತ್ಮ, ಭಗವಾನ್ ಎಂದು ಮುಂತಾಗಿ ಕರೆಯಲ್ಪಡುತ್ತದೆ ಎಂದು ಸಾರುತ್ತಾರೆ." ಭಾರತೀಯ ಆಧ್ಯಾತ್ಮಿಕ ಪರಂಪರೆಯ ಮೇಲೆ ಅಗಾಧ ಪ್ರಭಾವವನ್ನು ಬೀರಿದ ಈ ಪುರಾತನ ಭಾವನೆಯನ್ನೇ ಶ್ರೀರಾಮಕೃಷ್ಣರು ತಮ್ಮ ಅನುಭವಗಳ ಮೂಲಕ ಪುನಃಪ್ರತಿಪಾದಿಸಿದರು.

**ಆಧ್ಯಾತ್ಮಿಕ ಬೆಳವಣಿಗೆಯ ಹಂತಗಳು:**

ಭಾಗವತದ ಪ್ರಥಮ ಸ್ಕಂಧದ ಈ ಕೆಳಗಿನ ಶ್ಲೋಕಗಳು ಆಧ್ಯಾತ್ಮಿಕ ಬೆಳವಣಿಗೆಯ ವಿವಿಧ ಹಂತಗಳನ್ನು ಚಿತ್ರಿಸುತ್ತವೆ:

**ಶೃಣ್ವತಾಂ ಸ್ವಕಥಾಂ ಕೃಷ್ಣಃ ಪುಣ್ಯಶ್ರವಣಕೀರ್ತನಃ ।**
**ಹೃದ್ಯಂತಸ್ಥೋ ಹ್ಯಭದ್ರಾಣಿ ವಿಧುನೋತಿ ಸುಹೃತ್ ಸತಾಮ್**
॥ ೧.೨.೧೭ ॥

"ಭಕ್ತರ ಸ್ನೇಹಿತನಾದ ಕೃಷ್ಣನು ತನ್ನ ಹೆಸರನ್ನು ಉಚ್ಚರಿಸುವವರ ಹೃದಯವನ್ನು ಶುದ್ಧಗೊಳಿಸುತ್ತಾನೆ, ತನ್ನ ಲೀಲೆಯನ್ನು ಕೇಳುವವರ ಹೃದಯದಲ್ಲಿ ಅಭಿವ್ಯಕ್ತಗೊಳ್ಳುತ್ತಾನೆ ಮತ್ತು ಅವರ ಆಧ್ಯಾತ್ಮಿಕ ಬೆಳವಣಿಗೆಗೆ ತಡೆಯಾಗುವ ದುಷ್ಟವೃತ್ತಿಗಳನ್ನೆಲ್ಲ ನಿವಾರಿಸುತ್ತಾನೆ."

**ನಷ್ಟಪ್ರಾಯೇಷ್ವಭದ್ರೇಷು ನಿತ್ಯಂ ಭಾಗವತಸೇವಯಾ ।**
**ಭಗವತ್ಯುತ್ತಮಶ್ಲೋಕೇ ಭಕ್ತಿರ್ಭವತಿ ನೈಷ್ಠಿಕೀ॥ ೧.೨.೧೮ ॥**

"ದುಷ್ಟವೃತ್ತಿಗಳು ನಿವಾರಣೆಯಾದಮೇಲೆ ಸಾಧುಸೇವೆ ಮತ್ತು ಭಕ್ತಿಶಾಸ್ತ್ರದ ಅಧ್ಯಯನದ ಮೂಲಕ ವೈಭವ ಹಾಗೂ ಅನುಗ್ರಹ ಸಂಪನ್ನನಾದ ಭಗವಂತನಲ್ಲಿ ನಿಷ್ಠಾಭಕ್ತಿ ಉಂಟಾಗುತ್ತದೆ."

**ತದಾ ರಜಸ್ತಮೋಭಾವಾಃ ಕಾಮಲೋಭಾದಯಶ್ಚ ಯೇ ।**
**ಚೇತ ಏತೈರನಾವಿದ್ಧಂ ಸ್ಥಿತಂ ಸತ್ತ್ವೇ ಪ್ರಸೀದತಿ ॥೧.೨.೧೯॥**

"ಭಕ್ತಿಯು ವೃದ್ಧಿಯಾದಂತೆಲ್ಲ ರಜಸ್ಸು ಹಾಗೂ ತಮಸ್ಸುಗಳ ಉತ್ಪನ್ನವಾದ ಕಾಮಲೋಭಾದಿಗಳಿಂದ ಮನಸ್ಸು ಮುಕ್ತವಾಗುತ್ತದೆ, ಮತ್ತು ಸಾತ್ತ್ವಿಕ ಭಾವವನ್ನು ಪಡೆದು ಶಾಂತವಾಗುತ್ತದೆ."

**ಏವಂ ಪ್ರಸನ್ನಮನಸೋ ಭಗವದ್‌ಭಕ್ತಿಯೋಗತಃ ।**
**ಭಗವತ್ತತ್ತ್ವವಿಜ್ಞಾನಂ ಮುಕ್ತಸಂಗಸ್ಯ ಜಾಯತೇ ॥೧.೨.೨೦॥**

"ಹೀಗೆ ಭಕ್ತಿಯೋಗದ ಮೂಲಕ ಪ್ರಸನ್ನ ಮನಸ್ಸನ್ನು ಪಡೆದಿರುವ, ಎಲ್ಲ ಪ್ರಾಪಂಚಿಕ ಆಸಕ್ತಿಯಿಂದ ಮುಕ್ತನಾಗಿರುವ ಸಾಧಕನಿಗೆ ಭಗವಂತನ ಸ್ವರೂಪಜ್ಞಾನವುಂಟಾಗುತ್ತದೆ."

**ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।**
**ಕ್ಷೀಯಂತೇ ಚಾಸ್ಯ ಕರ್ಮಾಣಿ ದೃಷ್ಟ ಏವಾತ್ಮನೀಶ್ವರೇ**
॥ ೧.೨.೨೧ ॥

"ತನ್ನಾತ್ಮದಲ್ಲಿಯೇ ಪರಮಾತ್ಮನ ಜ್ಞಾನ ಉಂಟಾದ ಮೇಲೆ ಅಹಂಕಾರಮೂಲವಾದ ಹೃದಯಗ್ರಂಥಿಗಳೆಲ್ಲ ಕತ್ತರಿಸಲ್ಪಡುವುವು, ಮನಸ್ಸಿನ ಸಂಶಯಗಳೆಲ್ಲ ನಾಶವಾಗುವುವು ಮತ್ತು ಪೂರ್ವಕರ್ಮಗಳೆಲ್ಲವೂ ಲುಪ್ತವಾಗುವುವು."

**ಕಪಿಲನ ಉಪದೇಶ**:

ಮೂರನೆಯ ಸ್ಕಂಧದಲ್ಲಿ ಭಗವದವತಾರದ ಕಥೆ ಇದೆ. ಭಗವಂತನು ಕಪಿಲನಾಗಿ ಅವತರಿಸುತ್ತಾನೆ. ಕಪಿಲನು ಮನೆಯನ್ನು ತೊರೆದು ಕಾಡಿಗೆ ಹೋಗಲು ಇಷ್ಟಪಡುತ್ತಾನೆ. ಅವನ ತಾಯಿ ದೇವಹೂತಿ ಕಪಿಲನಿಗೆ ಹೇಳಿದಳು: "ಪ್ರಿಯ ಪುತ್ರನೇ, ನೀನು ಹೊರಡುವುದಕ್ಕೆ ಮುಂಚೆ ನನಗೆ ಆಧ್ಯಾತ್ಮಿಕ ಉಪದೇಶವನ್ನು ನೀಡು." ತಾಯಿಯ ಮಾತಿನಂತೆ ಕಪಿಲನು ಆಧ್ಯಾತ್ಮಿಕ ಉಪದೇಶವನ್ನು ನೀಡುತ್ತಾನೆ. ಅದರಲ್ಲಿ ವಿಶಿಷ್ಟ ಅರ್ಥವನ್ನೊಳಗೊಂಡ ಈ ಕೆಳಗಿನ ಶ್ಲೋಕಗಳು ಬರುತ್ತವೆ:

**ಅಹಂ ಸರ್ವೇಷು ಭೂತೇಷು ಭೂತಾತ್ಮಾವಸ್ಥಿತಃ ಸದಾ ।**
**ತಮವಜ್ಞಾಯ ಮಾಂ ಮರ್ತ್ಯಃ ಕುರುತೇಽರ್ಚಾ ವಿಡಂಬನಮ್**
॥ ೩.೨೯.೨೧ ॥

"ನಾನು ಎಲ್ಲರಲ್ಲಿಯೂ ಅವರ ಆತ್ಮವಾಗಿ ನೆಲೆಸಿರುವೆನು. ಆ ರೀತಿ ನೆಲಸಿರುವ ನನ್ನನ್ನು ಕಡೆಗಣಿಸಿ ಮೂರ್ತಿಯಲ್ಲಿ ಮಾತ್ರ ನನ್ನನ್ನು ಪೂಜಿಸುವುದು ಒಂದು ವಿಡಂಬನೆಯೇ ಸರಿ!"

**ಅಹಮುಚ್ಚಾವಚೈರ್ದ್ರವ್ಯೈಃ ಕ್ರಿಯಯೋತ್ಪನ್ನಯಾನಘೇ ।**
**ನೈವ ತುಷ್ಯೇಽರ್ಚಿತೋಽರ್ಚಾಯಾಂ**
**ಭೂತಗ್ರಾಮಾವಮಾನಿನಃ** ॥೩.೨೯.೨೪॥

"ಹೇ ಪಾಪದೂರಳೇ, ಸರ್ವಭೂತಗಳಲ್ಲಿ ನೆಲೆಸಿರುವ ನನ್ನನ್ನು ಅವಮಾನಿಸುತ್ತ ಯಾರು ನನ್ನನ್ನು ಅನೇಕ ಪರಿಕರಗಳಿಂದ ಮೂರ್ತಿಯಲ್ಲಿ ಪೂಜಿಸುತ್ತಾರೊ ಆ ಪೂಜೆಯಿಂದ ನಾನು ತೃಪ್ತನಾಗುವುದೇ ಇಲ್ಲ."

**ಅಥ ಮಾಂ ಸರ್ವಭೂತೇಷು ಭೂತಾತ್ಮಾನಂ ಕೃತಾಲಯಮ್।**
**ಅರ್ಹಯೇದ್ದಾನಮಾನಾಭ್ಯಾಂ ಮೈತ್ರ್ಯಾಭಿನ್ನೇನ ಚಕ್ಷುಷಾ**
॥ ೩.೨೯.೨೭ ॥

"ಆದ್ದರಿಂದ, ಎಲ್ಲ ಜೀವಿಗಳನ್ನೂ ಆಲಯವನ್ನಾಗಿ ಮಾಡಿಕೊಂಡು ನೆಲಸಿರುವ ನನ್ನನ್ನು ದಾನದ ಮೂಲಕವೂ (ಜೀವಿಗಳ ಕೊರತೆಯನ್ನು ನೀಗಿಸುವುದರ ಮೂಲಕ) ಮಾನದ ಮೂಲಕವೂ (ಅವರಿಗೆ ಗೌರವ ತೋರಿಸುವುದರ ಮೂಲಕ) ಸ್ನೇಹಭಾವದಿಂದ, ಭೇದಭಾವವಿಲ್ಲದೆ ಅರ್ಚಿಸಬೇಕು."

ಹೀಗೆ ಮೂರನೆ ಸ್ಕಂಧದ ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ ನೈಜ ಆಧ್ಯಾತ್ಮಿಕ ಜೀವನದ ಅದ್ಭುತ ವ್ಯಾಖ್ಯಾನವನ್ನು ಕಾಣುತ್ತೇವೆ. ಭಗವಂತನನ್ನು ದೇವಾಲಯದಲ್ಲಿ ಮಾತ್ರವಲ್ಲದೆ, ಮೂರ್ತಿಯಲ್ಲಿ ಮಾತ್ರವಲ್ಲದೆ ಎಲ್ಲರ ಹೃದಯದಲ್ಲಿಯೂ ಪೂಜಿಸಬೇಕು ಎಂಬ ಶ್ರೇಷ್ಠ ಭಾವನೆಯನ್ನು ಓದುಗರ ಗಮನಕ್ಕೆ ತರಲಾಗಿದೆ.

ಕಳೆದ ಒಂದು ಸಾವಿರ ವರ್ಷಗಳಿಂದ ಭಾರತದಲ್ಲಿ ನಾವು ಈ ಸುಂದರ ಭಾವನೆಯನ್ನು ಮರೆತೆವು. ನಾವು ಮಾನವನ ಪರಿಸ್ಥಿತಿಯನ್ನು ಕಡೆಗಣಿಸಿದೆವು. ಆದರೆ ದೇವಾಲಯದಲ್ಲಿ ಮೂರ್ತಿಪೂಜೆ ಮಾಡುವವರು ಯಾವಾಗಲೂ ಬೇಕಾದಷ್ಟು ಜನರಿದ್ದರು. ನಾವು ಮಾನವರನ್ನು ಕಡೆಗಣಿಸಿದುದರಿಂದಲೇ ನೂರಾರು ವರ್ಷಗಳ ವಿದೇಶಿ ಗುಲಾಮಗಿರಿಗೆ ಒಳಗಾದೆವು. ಅನೇಕ ಶತಮಾನಗಳಿಂದ ನಾವು ಈ ಬೋಧನೆಯನ್ನು ಕಡೆಗಣಿಸಿದೆವು. ನಾವು ಭಾಗವತವನ್ನು ಪಾರಾಯಣ ಮಾಡುತ್ತಿದ್ದರೂ ಅದರ ಹಿಂದಿರುವ ತಿರುಳನ್ನು ಗ್ರಹಿಸಲಿಲ್ಲ. ಇಪ್ಪತ್ತೇಳನೆಯ ಶ್ಲೋಕದಲ್ಲಿ ಕಪಿಲ ಹೇಳುತ್ತಾನೆ, ನನ್ನನ್ನು ಎಲ್ಲ ಜೀವಿಗಳಲ್ಲೂ ಪೂಜಿಸಬೇಕು, ಎಂದು. ಏಕೆಂದರೆ ನಾನು ಅವುಗಳ ಆತ್ಮ, ಅವರ ದೇಹದಲ್ಲಿ ಮನೆಮಾಡಿಕೊಂಡಿರುವೆನು.

**ಎರಡು ವಿಶಿಷ್ಟ ಪದಗಳು**:

ಇಲ್ಲಿ ಎರಡು ವಿಶಿಷ್ಟವಾದ ಪದಗಳಿವೆ : ಮೈತ್ರ್ಯಾ ಮತ್ತು **ಅಭಿನ್ನೇನ ಚಕ್ಷುಷಾ**. ಮೊದಲನೆಯದಾಗಿ ನೀವು ಸ್ನೇಹಪರರಾಗಬೇಕು. ನೀವು ಕೆಲಸ ಮಾಡಲು ಭಾರತೀಯ ಹಳ್ಳಿಗೆ ಹೋದರೆ ಹಳ್ಳಿಗರು ನಿಮ್ಮನ್ನು ನೋಡಿ ಭಯಪಡುತ್ತಾರೆ. ಏಕೆಂದರೆ ಅವರು ಯಾವಾಗಲೂ ಶೋಷಿತರಾದವರು, ನೀವು ಶೋಷಣೆಗಾಗಿಯೇ ಬಂದಿರುವಿರೆಂದು ಅವರು ಭಾವಿಸುತ್ತಾರೆ. ಆದ್ದರಿಂದ ನೀವು ಮೊದಲು ಅವರ ಸ್ನೇಹಿತರಾಗಬೇಕು, ಆಗಲೇ ಅವರಿಗೆ ಸರಿಯಾದ ರೀತಿಯಲ್ಲಿ ಸೇವೆ ಸಲ್ಲಿಸಲು ಸಾಧ್ಯ. ಕೊನೆಯದಾಗಿ, ಅದ್ವೈತ ವೇದಾಂತದ ಕೇಂದ್ರ ವಿಚಾರವಾದ ಒಂದು ಅಗಾಧವಾದ ಭಾವನೆ ಬರುತ್ತದೆ. ಅದಾವುದದು? **ಅಭಿನ್ನೇನ ಚಕ್ಷುಷಾ**—"ಭೇದಭಾವನೆ ಇಲ್ಲದೆ." ನಾವೆಲ್ಲರೂ ಒಂದು. ನಾವು ಪ್ರತ್ಯೇಕ ವ್ಯಕ್ತಿಗಳಲ್ಲ. ಎಂಥ ವಿಶಾಲ ಭಾವನೆ! ಉಪನಿಷತ್ತಿನ ಕಾಲದಿಂದಲೂ ಭಾರತ ಈ ಭಾವನೆಯನ್ನು ಬೋಧಿಸುತ್ತ ಬಂದಿದೆ. ಆದರೆ ಈ ದೇಶವು ಯಾವಾಗಲೂ ಭಿನ್ನದೃಷ್ಟಿಯನ್ನೆ ಅನುಸರಿಸಿದೆ. ವರ್ಣಭೇದವೇ ಮುಂತಾದ ಅನೇಕ ಬಗೆಯ ಗುಲಾಮಗಿರಿಯನ್ನು ನೂರಾರು ವರ್ಷಗಳಿಂದ ನಾವು ಅನುಸರಿಸಿಕೊಂಡು ಬಂದಿದ್ದೇವೆ. ಸ್ವಾಮಿ ವಿವೇಕಾನಂದರು ಭಾರತವನ್ನೆಲ್ಲ ಸುತ್ತಾಡಿ ಜನರ ದುಃಖವನ್ನು ಕಣ್ಣಾರೆ ಕಂಡರು. ಅಮೆರಿಕದಿಂದ ೨೦.೮.೧೮೯೩ರಂದು ಅಳಸಿಂಗ ಪೆರುಮಾಳರಿಗೆ ಬರೆದ ಪತ್ರದಲ್ಲಿ ಸ್ವಾಮೀಜಿ ಹೇಳುತ್ತಾರೆ:

"ಮಾನವನ ಉತ್ಕೃಷ್ಟತೆಯನ್ನು, ಮಹಿಮೆಯನ್ನು ಹಿಂದೂ ಧರ್ಮದಷ್ಟು ಉಚ್ಚರೀತಿಯಲ್ಲಿ ಮತ್ತಾವ ಧರ್ಮವೂ ಹೇಳುವುದಿಲ್ಲ. ಆದರೆ ಹಿಂದೂಧರ್ಮದಲ್ಲಿ, ದರಿದ್ರರನ್ನು, ದೀನರನ್ನು ತುಳಿಯುವಂತೆ ಮತ್ತಾವ ಧರ್ಮದಲ್ಲಿಯೂ ಇಲ್ಲ." **(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೪, ಪು.೮೭)**

ಮೇಲಿನ ಶ್ಲೋಕಗಳಲ್ಲಿ ಉಕ್ತವಾಗಿರುವ ಈ ಶ್ರೇಷ್ಠ ಭಾವನೆಗಳು ಸ್ವಾಮಿ ವಿವೇಕಾನಂದರ ಸೇವಾತತ್ತ್ವದ ಕೇಂದ್ರ ವಿಷಯವಾದವು. ಪೂಜ್ಯ ಭಾವನೆಯನ್ನು ಸೇರಿಸಿದಾಗ ಸೇವೆಯು ಪೂಜೆಯಾಗುತ್ತದೆ. ಈ ರೀತಿಯ ಸೇವೆಯೇ ನೈಜ ಧರ್ಮದ ಮತ್ತು ಅಂತರ ಮಾನವ ಸಂಬಂಧದ ಅತ್ಯುತ್ತಮ ರೂಪ. ದೇವಾಲಯಕ್ಕೆ ಸಂಬಂಧಿಸಿದ ಕ್ರಿಯಾವಿಧಿಗಳ ಮತ್ತು ಮಾನವಶೋಷಣೆಯ ಬದಲು ಈ ರೀತಿಯ ಸೇವಾತತ್ತ್ವವನ್ನು ಅನುಸರಿಸಲು ಸ್ವಾಮೀಜಿ ಆಧುನಿಕ ಭಾರತೀಯರಿಗೆ ಕರೆಕೊಟ್ಟರು. ೧೮೯೭ರಲ್ಲಿ ಚೆನ್ನೈನಲ್ಲಿ ನೀಡಿದ "ಭಾರತದ ಭವಿಷ್ಯ" ಎಂಬ ಉಪನ್ಯಾಸದಲ್ಲಿ ಅವರು ಹೇಳುತ್ತಾರೆ:

"ಮೊದಲು ಗುಲಾಮತನದಿಂದ ಪಾರಾಗಿ. ಬರುವ ಐವತ್ತು ವರ್ಷಗಳವರೆಗೆ ಈ ಮಾತೃಭೂಮಿಯೇ ನಮ್ಮ ಆರಾಧನೆಯ ಇಷ್ಟದೈವವಾಗಬೇಕು. ಇನ್ನುಳಿದ ವ್ಯರ್ಥ ದೇವತೆಗಳೆಲ್ಲ ಕೆಲವು ಕಾಲ ನಮ್ಮಿಂದ ಮರೆಯಾಗಲಿ. ಜಾಗ್ರತನಾಗಿರುವ ದೇವರು ಇದೊಂದೇ, ಇದೇ ನಮ್ಮ ಜನಾಂಗ. ಎಲ್ಲೆಲ್ಲೂ ಅವನ ಕಾಲುಗಳೇ, ಎಲ್ಲೆಲ್ಲೂ ಅವನ ಕೈಗಳೇ. ಎಲ್ಲೆಲ್ಲೂ ಅವನ ಕಿವಿಗಳೇ. ಅವನೇ ಸರ್ವವ್ಯಾಪಿಯಾಗಿರುವನು. ಇತರ ದೇವತೆಗಳೆಲ್ಲ ನಿದ್ರಿಸುತ್ತಿರುವರು. ತಮ್ಮ ಸುತ್ತಲೂ ಇರುವ ವಿರಾಟ್‌ಮಹೇಶ್ವರನ ಆರಾಧನೆಯನ್ನು ತೊರೆದು ಕೆಲಸಕ್ಕೆ ಬಾರದ ಇತರ ದೇವರನ್ನು ಏಕೆ ಅರಸಿಕೊಂಡು ಹೋಗುವುದು? ನಾವು ಇದನ್ನು ಆರಾಧಿಸಿದರೆ ಇತರ ದೇವತೆಗಳನ್ನು ಆರಾಧಿಸಿದಂತೆ. ಅರ್ಧ ಮೈಲಿ ಕೂಡ ತೆವಳಿಕೊಂಡು ಹೋಗಲಾರೆವು. ಆದರೂ ಹನುಮಂತನಂತೆ ಸಾಗರವನ್ನೇ ನೆಗೆಯಲು ಇಚ್ಛಿಸುವೆವು! ಇದು ಸಾಧ್ಯವಿಲ್ಲ. ಪ್ರತಿಯೊಬ್ಬನೂ ಯೋಗಿಯಾಗುವನೆ? ಪ್ರತಿಯೊಬ್ಬನೂ ಧ್ಯಾನಮಗ್ನನಾಗುವನೆ? ಇದು ಸಾಧ್ಯವಿಲ್ಲ. ಹಗಲೆಲ್ಲ ಪ್ರಾಪಂಚಿಕತೆಯಲ್ಲಿ, ಕರ್ಮದಲ್ಲಿ ನಿರತರಾಗಿ ರಾತ್ರಿ ಕಣ್ಣು ಮುಚ್ಚಿಕೊಂಡು ಪ್ರಾಣಾಯಾಮ ಮಾಡುವುದು! ಇದು ಅಷ್ಟು ಸುಲಭವೆ? ಮೂಗಿನ ಮೂಲಕ ನೀವು ಮೂರು ವೇಳೆ ಪ್ರಾಣಾಯಾಮ ಮಾಡಿಬಿಟ್ಟರೆ ಋಷಿಗಳು ಆಕಾಶದಿಂದ ನಿಮ್ಮ ಹತ್ತಿರ ಕೆಳಗೆ ಇಳಿಯುವರೆ? ಇದು ತಮಾಷೆಯೆ? ಇದರಲ್ಲಿ ಅರ್ಥವಿಲ್ಲ. ಮೊದಲು ಬೇಕಾಗಿರುವುದು ಚಿತ್ತಶುದ್ಧಿ. ಅದು ಹೇಗೆ ಸಿದ್ಧಿಸುವುದು? ಪ್ರಥಮದಲ್ಲಿ ಮಾಡಬೇಕಾದ ಪೂಜೆಯೇ ನಮ್ಮ ಸುತ್ತಲೂ ಇರುವ ವಿರಾಟನ ಪೂಜೆ.

"Worship (ಪೂಜೆ) ಎನ್ನುವುದೇ ಸಂಸ್ಕೃತ ಶಬ್ದಕ್ಕೆ ಸರಿಯಾದ ಪರ್ಯಾಯ ಪದ. ಇಂಗ್ಲಿಷಿನಲ್ಲಿ ಮತ್ತಾವ ಪದವೂ ಇದನ್ನು ಹೋಲುವುದಿಲ್ಲ. ಮನುಷ್ಯರು, ಪ್ರಾಣಿಗಳು ಇವರೆಲ್ಲ ನಮ್ಮ ದೇವರು. ನಾವು ಮೊದಲು ಪೂಜಿಸಬೇಕಾದ ದೇವರೇ ನಮ್ಮ ದೇಶಬಾಂಧವರು. ಅವರನ್ನು ಪೂಜಿಸಬೇಕು. ನಮ್ಮ ನಮ್ಮಲ್ಲಿ ಜಗಳ ಕಾಯುವುದು, ಪರಸ್ಪರ ಅಸೂಯೆ ಪಡುವುದು ನಿಲ್ಲಬೇಕು. ಇದೊಂದು ಭಯಂಕರ ಕರ್ಮ, ಇದಕ್ಕಾಗಿ ನಾವೆಲ್ಲ ಇಂದು ವ್ಯಥೆಪಡುತ್ತಿರುವೆವು. ಆದರೂ ನಾವು ಜಾಗ್ರತರಾಗಿಲ್ಲ," **(ಕೃತಿಶ್ರೇಣಿ. ಸಂ.೩,ಪು.೧೭೨-೭೩).**

ಮಾನವರಲ್ಲಿ ಭಗವಂತನನ್ನು ಪೂಜಿಸುವುದೆಂದರೆ ಬೀದಿಯಲ್ಲಿ ಹೋಗುವವನನ್ನು ಕರೆದು ಕೂರಿಸಿ ವಿಗ್ರಹವನ್ನು ಪೂಜಿಸುವಂತೆ ಧೂಪದೀಪಾದಿಗಳ ಮೂಲಕ ಮಂತ್ರವನ್ನು ಪಠಿಸುತ್ತ, ಘಂಟೆ ಬಾರಿಸುತ್ತ ಅವನನ್ನು ಪೂಜಿಸುವುದಲ್ಲ. ಹಾಗೆ ಮಾಡಿದರೆ ಹಾಸ್ಯಾಸ್ಪದವಾಗುತ್ತದೆ, ಅಷ್ಟೇ ಅಲ್ಲ, ಅದು ಪೂಜೆಯಾಗದೆ ಪೀಡೆಯಾಗುತ್ತದೆ. ಈ ರೀತಿಯ ಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನು ಶ್ಲೋಕ ತಿಳಿಸುತ್ತದೆ. ದಾನ ಮಾನಗಳ ಮೂಲಕ ಪೂಜಿಸಬೇಕೆಂದು ಅದು ಹೇಳುತ್ತದೆ. ಅಂದರೆ ಗೌರವಪೂರ್ವಕವಾಗಿ ಸೇವೆ ಸಲ್ಲಿಸುವುದು. ಹಸಿದವರಿಗೆ ಉಣಬಡಿಸುವುದು, ಉದ್ಯೋಗ ಹೀನರಿಗೆ ಉದ್ಯೋಗ ದೊರಕಿಸಿಕೊಡುವುದು ಇತ್ಯಾದಿ. ಉನ್ನತ ಸಾಮಾಜಿಕ ಸ್ಥಾನದಲ್ಲಿ ನಿಂತು, ಅಭಿಮಾನದಿಂದ ಕೆಲವರಿಗೆ ಕೆಲವು ನಾಣ್ಯಗಳನ್ನು ಎಸೆಯುವುದು ನಿಜವಾದ ಪೂಜೆಯಾಗುವುದಿಲ್ಲ. ಇದರಿಂದ ಸಹಾಯ ಪಡೆದವನ ಆತ್ಮಗೌರವಕ್ಕೆ ಚ್ಯುತಿಯುಂಟಾಗುತ್ತದೆ. ಇಂತಹ ದಾನ ದಬ್ಬಾಳಿಕೆಯಿಂದ ಪ್ರೇರಿತವಾದುದು. ಅದನ್ನು ತೊರೆದು ಪೂಜ್ಯಭಾವದ ಸೇವೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ ಎಂದು ಶ್ಲೋಕ ಹೇಳುತ್ತದೆ. ಇದು ಪ್ರಜಾಪ್ರಭುತ್ವ ಆಡಳಿತಕ್ಕೆ ಸಂವಾದಿಯಾದುದು.

ನಿಜವಾಗಿಯೂ, ಕೆಲಸ ಹೇಗೆ ಪೂಜೆಯಾಗುತ್ತದೆ? ಅದಕ್ಕೆ ಪೂಜ್ಯ ಭಾವವನ್ನು ಸೇರಿಸಿದಾಗ. ದೇವಾಲಯದ ಸುತ್ತ ಇರುವ ಹುಲ್ಲನ್ನು ಪೂಜ್ಯ ಭಾವದಿಂದ ಕತ್ತರಿಸಿದರೆ, ಅದು ಕೈಂಕರ್ಯ ಅಥವಾ ಭಗವತ್ ಪೂಜೆಯಾಗುತ್ತದೆ. ದಾನ ಮತ್ತು ಮಾನ ಇವುಗಳ ಜೊತೆಗೆ ಶ್ಲೋಕವು ಇನ್ನೆರಡು ಭಾವನೆಗಳನ್ನು ಸೇರಿಸುತ್ತದೆ: **ಮೈತ್ರ್ಯಾ** ಮತ್ತು **ಅಭಿನ್ನೇನ ಚಕ್ಷುಷಾ**—ಅಂದರೆ ಸ್ನೇಹಭಾವ ಮತ್ತು ಅಭೇದ ದೃಷ್ಟಿ. ನಾನು ಗುಡಿಸಲಿನಲ್ಲಿ ಇರಬಹುದು, ನೀವು ಸಿಂಹಾಸನದ ಮೇಲೆ ಇರಬಹುದು ಅಥವಾ ಇದು ಅದಲು ಬದಲೂ ಆಗಿರಬಹುದು. ಆದರೆ ಭೇದಭಾವ ಇರಬೇಕಾಗಿಲ್ಲ, ಏಕೆಂದರೆ ನಮ್ಮೆಲ್ಲರಲ್ಲೂ ಇರುವ ದೇವರು ಒಬ್ಬನೇ. ಇದೇ ಆಧ್ಯಾತ್ಮಿಕತೆಯ ಪ್ರಜಾಸತ್ತೆ ಮತ್ತು ಪ್ರಜಾಸತ್ತೆಯ ಆಧ್ಯಾತ್ಮಿಕತೆ. ಪ್ರಜಾಪ್ರಭುತ್ವ ರಾಜ್ಯದಲ್ಲಿ ನಾವೆಲ್ಲರೂ ಸಮಾನ ಹಕ್ಕುಳ್ಳ ಪ್ರಜೆಗಳು.

ಸ್ವಾಮೀಜಿ ಈ ಜನರನ್ನು ಪೂಜಿಸಲು ನಮಗೆ ಕರೆಕೊಟ್ಟರು. ಇಲ್ಲಿ ಸೇವೆಗಿಂತ ಪೂಜೆ ಎಂಬ ಶಬ್ದವೇ ಹೆಚ್ಚು

ಯುಕ್ತವಾದುದು. ಎಲ್ಲರಲ್ಲೂ ದಿವ್ಯತೆ ಅಡಗಿರುವುದು, ಮಾನವರಿಗೆ ಸೇವೆ ಸಲ್ಲಿಸುವುದೇ ನಿಜವಾದ ಪೂಜೆ—ಇದೇ ರಾಮಕೃಷ್ಣ-ವಿವೇಕಾನಂದ ತತ್ತ್ವದ ಮೂಲಸೂತ್ರ. ಪ್ರತಿಯೊಂದು ಜೀವವೂ ಶಿವ, ಎಂದು ಶ್ರೀರಾಮಕೃಷ್ಣರು ಹೇಳಿದರು. ಜೀವಸೇವೆಯೇ ಶಿವಪೂಜೆ. ಭಾರತದಲ್ಲಿ ಕಲಿಯಬೇಕಾದ ಶ್ರೇಷ್ಠಪಾಠ ಇದು. ನಮ್ಮ ತತ್ತ್ವ, ನಮ್ಮ ಆಧ್ಯಾತ್ಮಿಕತೆ ತುಂಬ ಉನ್ನತವಾದುದು. ಆದರೆ ನಮ್ಮ ಸಮಾಜ ಅತ್ಯಂತ ಕೆಳಮಟ್ಟದ್ದು. ಇಲ್ಲಿ ಮಾನವಜೀವಿಗೆ ಸ್ಥಾನವೇ ಇಲ್ಲ. ಈ ಆಧುನಿಕ ಯುಗದಲ್ಲಿ ಸ್ವಾಮಿ ವಿವೇಕಾನಂದರು ನಮ್ಮ ಸಾಮಾಜಿಕ ಸಂಬಂಧಗಳಲ್ಲಿ ಕ್ರಾಂತಿ ಉಂಟುಮಾಡಲು, ಸಮತ್ವ ಭಾವವನ್ನು ಸೃಷ್ಟಿಸಲು ಬಂದರು. ಗೀತೆಯಲ್ಲಿ ಶ್ರೀಕೃಷ್ಣನು, ನಾವೆಲ್ಲರೂ ಒಂದೇ ಎಂಬ ಈ ಭಾವನೆಯನ್ನು ಬೋಧಿಸಿದನು. ಇಂದು ನಮ್ಮಲ್ಲಿ ರಾಜರುಗಳಿಲ್ಲ, ಚಕ್ರವರ್ತಿಗಳಿಲ್ಲ, ನಾವೆಲ್ಲ ಸ್ವತಂತ್ರ ಭಾರತದ ಪ್ರಜೆಗಳು. ಎಲ್ಲರಿಗೂ ಮತದಾನದ ಹಕ್ಕಿದೆ. ನಾವೆಲ್ಲರೂ ಸಮಾನರು. ಈ ಪ್ರಜಾಪ್ರಭುತ್ವ ಆಡಳಿತ ವಿಧಾನವು ಮೇಲಿನ ಬೋಧನೆಗೆ ಸಮಾನವಾಗಿದೆ. **ಅಭಿನ್ನೇನ ಚಕ್ಷುಷಾ** ಎಂಬ ವೇದಾಂತದ ಈ ಶ್ರೇಷ್ಠ ಭಾವನೆಯನ್ನು ಜಾತಿ, ಕುಲ, ಮತ, ಸಾಮಾಜಿಕ ಸ್ಥಾನ ಮುಂತಾದ ಯಾವ ಭೇದವೂ ಇಲ್ಲದೆ ಎಲ್ಲರಿಗೂ ಅನ್ವಯಿಸಬೇಕು. ಎಲ್ಲರಲ್ಲೂ ದಿವ್ಯತೆ ಇದೆ ಎಂಬುದು ಉಪನಿಷತ್ತುಗಳ ಒಂದು ವಿಶಿಷ್ಟ ಆವಿಷ್ಕಾರ. ಮುಂದೆ ಈ ಭಾವನೆಯು ಗೀತೆಯಲ್ಲಿಯೂ ಭಾಗವತದಲ್ಲಿಯೂ ಇನ್ನೂ ಅನೇಕ ಶಾಸ್ತ್ರಗ್ರಂಥಗಳಲ್ಲಿಯೂ ವಿಸ್ತರಿಸಲ್ಪಟ್ಟಿದೆ. ಇಂದು ಶ್ರೀರಾಮಕೃಷ್ಣರು ಮತ್ತು ವಿವೇಕಾನಂದರು, ಮಾನವಸೇವೆಯ ಮೂಲಕ ದೇವರ ಪೂಜೆಯನ್ನು ಬೋಧಿಸಿ ಈ ಭಾವನೆಗೆ ಹೊಸ ಆಯಾಮವನ್ನು ನೀಡಿದರು.

**ಧ್ರುವನ ಕಥೆ:**

ನಾಲ್ಕನೆಯ ಸ್ಕಂಧದ ಎಂಟನೆಯ ಅಧ್ಯಾಯದಲ್ಲಿ ಧ್ರುವನ ತುಂಬ ಮಾರ್ಮಿಕವಾದ ಕಥೆಯಿದೆ. ಧ್ರುವ ರಾಜ ಉತ್ತಾನಪಾದನ ಪುತ್ರ, ರಾಜನ ಪತ್ನಿ ಸುನೀತಿಯ ಮೂಲಕ ಹುಟ್ಟಿದವನು. ಉತ್ತಾನಪಾದನಿಗೆ ತುಂಬ ಮೆಚ್ಚುಗೆಯಾದ ಸುರುಚಿ ಎಂಬ ಇನ್ನೊಬ್ಬಳು ಪತ್ನಿ ಇದ್ದಳು. ಸ್ವಾಭಾವಿಕವಾಗಿಯೇ ರಾಜನಿಗೆ ಆಕೆಯ ಪುತ್ರ ಉತ್ತಮನ ಮೇಲೆ ತುಂಬ ಒಲವು ಇತ್ತು. ಒಂದು ದಿನ ರಾಜನು ಉತ್ತಮನನ್ನು ತನ್ನ ತೊಡೆಯಮೇಲೆ ಕೂರಿಸಿಕೊಂಡು ಮುದ್ದಿಸುತ್ತಿರುವುದನ್ನು ಐದು ವರ್ಷದ ಬಾಲಕ ಧ್ರುವ ಕಂಡನು. ಅವನು ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಹೋದನು. ಇದನ್ನು ಕಂಡು ಕುಪಿತಳಾದ ಸುರುಚಿ ಧ್ರುವನಿಗೆ ಗದರಿಸಿದಳು: "ನಿನಗೆ ರಾಜನ ತೊಡೆಯ ಮೇಲೆ ಕುಳಿತುಕೊಳ್ಳುವ ಹಕ್ಕಿಲ್ಲ. ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದ್ದರೆ ಮಾತ್ರ ಕುಳಿತುಕೊಳ್ಳಬಹುದಿತ್ತು." ಧ್ರುವನಿಗೆ ತುಂಬ ವ್ಯಥೆಯಾಯಿತು. ಅವನು ತಾಯಿ ಸುನೀತಿಯ ಹತ್ತಿರ ಹೋಗಿ ಅಳತೊಡಗಿದ. ಸುನೀತಿ ಹೇಳಿದಳು: "ನಾನೇನು ಮಾಡಲಿ, ಮಗು? ನಾನು ಅಸಹಾಯಕಳು. ದೇವರನ್ನು ಪ್ರಾರ್ಥಿಸು. ಅವನೊಬ್ಬನೇ ಅನಾಥಬಂಧು, ನಿಜವಾದ ಆಶ್ರಯ. ಅವನು ಮಾತ್ರ ನಿನಗೆ ಸಹಾಯ ಮಾಡಬಲ್ಲ."

ತಂದೆಯ ತಿರಸ್ಕಾರದಿಂದ ಮನನೊಂದ ಬಾಲಕ ಧ್ರುವನು ಹರಿಯನ್ನು ಕುರಿತು ಧ್ಯಾನಿಸಲು ಕಾಡಿಗೆ ತೆರಳಿದನು. ದಾರಿಯಲ್ಲಿ ಸಿಕ್ಕಿದ ನಾರದರು, ಈ ಸಾಹಸ ಬೇಡ, ಮನೆಗೆ ಹಿಂದಿರುಗು, ಎಂದು ಸಲಹೆ ನೀಡಿದರು. ಆದರೆ ಧ್ರುವನ ನಿರ್ಧಾರ ದೃಢವಾಗಿತ್ತು. ತಾನು ದೇವರನ್ನು ಕುರಿತು ತಪಸ್ಸು ಮಾಡಲೇಬೇಕೆಂಬ ಅವನ ದೃಢಸಂಕಲ್ಪವನ್ನು ಮೆಚ್ಚಿ ನಾರದರು ಅವನಿಗೆ **ಓಂ ನಮೋ ನಾರಾಯಣಾಯ** ಎಂಬ ಮಂತ್ರವನ್ನಿತ್ತು, ಸಾಧನೆಯ ಬಗ್ಗೆ ಸೂಕ್ತ ಉಪದೇಶವನ್ನು ನೀಡಿದರು. ಅದರಂತೆ ಧ್ರುವ ಧ್ಯಾನ ಮಾಡಿದನು, ಕಠಿಣ ಜೀವನ ನಡೆಸಿದನು. ಆರು ತಿಂಗಳ ತಪಸ್ಸಿನನಂತರ ಶ್ರೀಹರಿ ಅವನ ಮುಂದೆ ಪ್ರತ್ಯಕ್ಷನಾದನು. ಆದರೆ ಧ್ರುವನು ಕಣ್ಣು ಮುಚ್ಚಿಕೊಂಡೇ ತನ್ನ ಹೃದಯದಲ್ಲಿ ಶ್ರೀಹರಿಯನ್ನು ಕಂಡು ಆನಂದಿಸುತ್ತಿದ್ದನು, ಕಣ್ತೆರೆದು ಮುಂದೆ ನಿಂತಿದ್ದ ಶ್ರೀಹರಿಯನ್ನು ನೋಡಲೇ ಇಲ್ಲ. ಆಗ ಹೃದಯದಲ್ಲಿದ್ದ ಹರಿಯು ಕಣ್ಮರೆಯಾದನು. ಈಗ ಧ್ರುವನು ಕಣ್ಣುಬಿಟ್ಟು ನೋಡುತ್ತಾನೆ, ಭಗವಂತನ ಆನಂದಮೂರ್ತಿ ಕಣ್ಮುಂದೆ ಇದೆ. ಅವನ ಆನಂದಕ್ಕೆ ಪಾರವೇ ಇಲ್ಲ. ಅವನಿಗೆ ಭಗವಂತನನ್ನು ಕೊಂಡಾಡಬೇಕೆಂಬಾಸೆ. ಆದರೆ ಅವನಿನ್ನೂ ಐದು ವರ್ಷದ ಹಸುಳೆ. ತನ್ನ ಭಕ್ತಿಭಾವವನ್ನು ಶಬ್ದಗಳ ಮೂಲಕ ಅವನಿಗೆ ಅಭಿವ್ಯಕ್ತಗೊಳಿಸಲಾಗಲಿಲ್ಲ. ಅವನಿಗೆ ಭಾಷೆಯ ಮೇಲೆ ಪ್ರಭುತ್ವವಿರಲಿಲ್ಲ. ಅವನು ಸುಮ್ಮನೆ ಕೈಮುಗಿದು ನಿಂತುಕೊಂಡಿದ್ದನು. ಅವನ ಅಸಹಾಯಕ ಸ್ಥಿತಿಯನ್ನು ಅರಿತ ಶ್ರೀಹರಿಯು ಜ್ಞಾನಸಂಕೇತವಾದ ಶಂಖದ ಮೂಲಕ ಧ್ರುವನ ಕೆನ್ನೆಯನ್ನು ಸ್ಪರ್ಶಿಸಿದನು.

**ಸ ತಂ ವಿವಕ್ಷಂತಮತದ್ವಿದಂ ಹರಿ-**
**ರ್ಜ್ಞಾತ್ವಾಸ್ಯ ಸರ್ವಸ್ಯ ಚ ಹೃದ್ಯವಸ್ಥಿತಃ ।**
**ಕೃತಾಂಜಲಿಂ ಬ್ರಹ್ಮಮಯೇನ ಕಂಬುನಾ**
**ಪಸ್ಪರ್ಶ ಬಾಲಂ ಕೃಪಯಾ ಕಪೋಲೇ** ॥೪.೯.೪॥

"ಒಂದು ಸ್ತೋತ್ರದ ಮೂಲಕ ಭಗವಂತನನ್ನು ಕೊಂಡಾಡಬೇಕೆಂದು ಹೆಣಗುತ್ತ ಧ್ರುವನು ಅವನ ಮುಂದೆ ಕೈಮುಗಿದು ನಿಂತಿದ್ದನು. ಹೇಗೆ ಮಾಡಬೇಕೆಂಬುದು ಅವನಿಗೆ ತಿಳಿಯದು. ಸರ್ವರ ಹೃದಯದಲ್ಲಿ ನೆಲೆಸಿರುವ ಶ್ರೀಹರಿಯು ಬಾಲಕನ ಸಮಸ್ಯೆಯನ್ನು ಅರ್ಥಮಾಡಿಕೊಂಡು, ಅನುಕಂಪೆಯಿಂದ, ಬ್ರಹ್ಮಮಯ ಶಂಖದಿಂದ ಧ್ರುವನ ಕೆನ್ನೆಯನ್ನು ಸ್ಪರ್ಶಿಸಿದನು."

ಸ ವೈ ತದೈವ ಪ್ರತಿಪಾದಿತಾಂ ಗಿರಾಂ
ದೈವೀಂ ಪರಿಜ್ಞಾತಪರಾತ್ಮನಿರ್ಣಯಃ ।
ತಂ ಭಕ್ತಿಭಾವೋಽಭ್ಯಗೃಣಾದಸತ್ವರಂ
ಪರಿಶ್ರುತೋರುಶ್ರವಸಂ ಧ್ರುವಕ್ಷಿತಿಃ ॥ ೪.೯.೫ ॥

"ಮುಂದೆ ಧ್ರುವತ್ವವನ್ನು ಪಡೆಯಬೇಕಾದ ಆ ಬಾಲಕನು ಶಂಖಸ್ಪರ್ಶದಿಂದ ಬ್ರಹ್ಮ ಮತ್ತು ಜೀವರ ಸ್ವರೂಪ ಜ್ಞಾನದಿಂದ ತುಂಬಿದವನಾಗಿ, ಧೈರ್ಯದಿಂದ, ಭಕ್ತಿಭಾವದಿಂದ ಜಗದ್ವಂದ್ಯನಾದ ಶ್ರೀಹರಿಯನ್ನು ಸ್ತುತಿಸತೊಡಗಿದನು."

ಯೋಽಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ
ಪುರುಷಾಯ ತುಭ್ಯಮ್ ॥೪.೯.೬॥

"ಓ ಸರ್ವಶಕ್ತನೇ, ನೀನೇ ನನ್ನ ಮನಸ್ಸನ್ನು ಪ್ರವೇಶಿಸಿ, ನಿನ್ನ ಶಕ್ತಿಯ ಮೂಲಕ, ಪ್ರಸುಪ್ತವಾದ ನನ್ನ ವಾಕ್‌ಶಕ್ತಿಯನ್ನು ಸಜೀವಗೊಳಿಸಿದೆ ಮತ್ತು ನನ್ನ ಕೈ, ಕಾಲು, ಕಿವಿ, ಚರ್ಮಾದಿ ಇಂದ್ರಿಯ ಮತ್ತು ಪ್ರಾಣಗಳಿಗೆ ಶಕ್ತಿಯನ್ನು ನೀಡಿದೆ. ಭಗವಂತನಾದ, ಎಲ್ಲರ ಆತ್ಮನಾದ ನಿನಗೆ ನಮಿಸುತ್ತೇನೆ."

ಭಾಗವತ ಹೇಳುತ್ತದೆ, "ಶ್ರೀಹರಿಯು ಕೃಪೆಯಿಂದ ಬ್ರಹ್ಮಮಯ ಶಂಖದಿಂದ ಬಾಲಕನ ಕೆನ್ನೆಯನ್ನು ಸ್ಪರ್ಶಿಸಿದನು" ಎಂದು. ತಕ್ಷಣವೇ ಧ್ರುವನ ಮನಸ್ಸಿನಲ್ಲಿ ಅಸಾಧ್ಯ ಜ್ಞಾನೋದಯವಾಯಿತು, ಮತ್ತು ಅವನು ಅದ್ಭುತವಾಗಿ ಭಗವಂತನನ್ನು ಸ್ತುತಿಸತೊಡಗಿದನು. ಇದು ಧ್ರುವನ ಕಥೆ.

ನಾವು ಯಾವುದನ್ನು ಧ್ರುವನಕ್ಷತ್ರ (pole star) ಎಂದು ಕರೆಯುತ್ತೇವೆಯೊ ಅದು ಈ ಬಾಲಕ ಧ್ರುವನಿಗೆ ಸಂಬಂಧಿಸಿದುದು. ಭಗವಂತನು ಬಾಲಕನಿಗೆ ಧ್ರುವನಕ್ಷತ್ರದ ಉನ್ನತ ಪದವಿಯನ್ನು ನೀಡಿದನು.

## ಪ್ರಹಸನ ಪ್ರಸಂಗ

ಸ್ವಾಮಿ ಅಶೋಕಾನಂದರು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದಲ್ಲಿರುವ ರಾಮಕೃಷ್ಣ ವೇದಾಂತ ಕೇಂದ್ರದ ಮುಖ್ಯಸ್ಥರಾಗಿ ಬಹಳ ಕಾಲ ಸೇವೆ ಸಲ್ಲಿಸಿದವರು. ಅವರು ಅನೇಕ ಆಧ್ಯಾತ್ಮಿಕ ಅನುಭವಗಳನ್ನು ಪಡೆದವರು, ಪ್ರಕಾಂಡ ಪಂಡಿತರು. ಉತ್ತಮ ವಾಗ್ಮಿಗಳು ಮತ್ತು ಶಕ್ತಿಶಾಲಿ ಬರಹಗಾರರು. ಅವರ ಲೇಖನಗಳು ಮತ್ತು ಉಪನ್ಯಾಸಗಳು ಅನೇಕ ರೂಪದಲ್ಲಿ ಪ್ರಕಟವಾಗಿವೆ. ಅವರು ಹಾಸ್ಯಪ್ರಿಯರೂ ಕೂಡ.

ಅವರು ಅಮೆರಿಕಕ್ಕೆ ಹೋಗುವುದಕ್ಕೆ ಮುಂಚೆ ಮದರಾಸಿನಿಂದ ಕಲಕತ್ತಕ್ಕೆ ರೈಲಿನಲ್ಲಿ ಹೋಗುತ್ತಿದ್ದರು. ಅವರು ಪ್ರಯಾಣಿಸುತ್ತಿದ್ದ ವಿಭಾಗದಲ್ಲಿ ಒಬ್ಬರು ಹಿರಿಯ ವ್ಯಕ್ತಿ ಕುಳಿತಿದ್ದರು, ತುಂಬ ಮಾತುಗಾರರು. ತಾವೇನಾಗಿಲ್ಲವೊ ಅದನ್ನು ತೋರ್ಪಡಿಸುವುದಕ್ಕೇ ಅವರ ಎಲ್ಲ ಮಾತುಗಳು. ಈಗ ಸಂನ್ಯಾಸಿಗಳೊಬ್ಬರ ಮುಂದೆ ತಾನು ಒಬ್ಬ ಧಾರ್ಮಿಕ ವ್ಯಕ್ತಿ ಎಂದು ತೋರಿಸಿಕೊಳ್ಳಬೇಡವೆ? ತಮ್ಮೆಲ್ಲ ಪುಸ್ತಕ ಜ್ಞಾನವನ್ನು ಉಪಯೋಗಿಸಿ ಮಾತಿನ ಹೊಳೆಯನ್ನು ಹರಿಸಿದರು. ಆ ವಿಭಾಗದಲ್ಲಿ ಕುಳಿತಿದ್ದ ಪ್ರಯಾಣಿಕರೆಲ್ಲರೂ ಇಷ್ಟವಿಲ್ಲದಿದ್ದರೂ ಅವರ ಮಾತನ್ನು ಕೇಳಲೇಬೇಕಿತ್ತು, ಏಕೆಂದರೆ ಅವರು ಗಟ್ಟಿಯಾಗಿ ಮಾತನಾಡುತ್ತಿದ್ದರು.

ರಾತ್ರಿಯಾಗಿ ಮಲಗುವ ಸಮಯವಾಯ್ತು. ಸ್ವಾಮಿ ಅಶೋಕಾನಂದರ ಹತ್ತಿರ ಕಾವಿ ಬಟ್ಟೆಯ ಹೊದಿಕೆಯಿದ್ದ ಒಂದು ತಲೆದಿಂಬು ಇತ್ತು. ಆ "ಧಾರ್ಮಿಕ ವ್ಯಕ್ತಿ"ಯ ಹತ್ತಿರ ತಲೆದಿಂಬು ಇರಲಿಲ್ಲ. ಅವರು ಅಶೋಕಾನಂದರನ್ನು ತಮಗೆ ಆ ತಲೆದಿಂಬನ್ನು ಕೊಡಬೇಕೆಂದು ಕೇಳಿದರು.

ಸಂನ್ಯಾಸಿಗಳಲ್ಲದವರು ಕಾವಿಬಟ್ಟೆಯನ್ನು ಉಪಯೋಗಿಸುವುದು ಉಚಿತವಲ್ಲವಾದುದರಿಂದ ಅಶೋಕಾನಂದರು ಆ ದಿಂಬನ್ನು ಕೊಡಲು ನಿರಾಕರಿಸಿದರು.

ಆಗ ಆ 'ಧಾರ್ಮಿಕ ವ್ಯಕ್ತಿ', "ನಾನೂ ಮಾನಸಿಕವಾಗಿ ಸಂನ್ಯಾಸಿಯೇ" ಎಂದರು.

ಅಶೋಕಾನಂದರು ತಕ್ಷಣವೇ, "*ಹಾಗಾದರೆ ಈ ತಲೆದಿಂಬನ್ನೂ ನೀವು ಮಾನಸಿಕವಾಗಿಯೇ ಉಪಯೋಗಿಸಿ*" ಎಂದುಬಿಟ್ಟರು.

ಅಲ್ಲಿದ್ದ ಪ್ರಯಾಣಿಕರೆಲ್ಲರೂ ಜೋರಾಗಿ ನಕ್ಕರು. ಆ ವ್ಯಕ್ತಿ ಪೆಚ್ಚುಮೋರೆ ಹಾಕಿಕೊಂಡು ಸುಮ್ಮನಾದರು. ಆದರೆ ಮುಂದೆ ಸ್ವಾಮಿ ಅಶೋಕಾನಂದರು ಈ ಘಟನೆಯನ್ನು ನೆನಸಿಕೊಂಡು, ತಾನು ಆ ರೀತಿ ಮಾತನಾಡಿ ಆ ವ್ಯಕ್ತಿಯ ಮನಸ್ಸನ್ನು ನೋಯಿಸಬಾರದಿತ್ತು ಎಂದು ಪಶ್ಚಾತ್ತಾಪ ಪಡುತ್ತಿದ್ದರು.